# ಕೆ.ಟಿ. ಗಟ್ಟಿ

## ವೈಚಾರಿಕತೆ–ಜನಪ್ರಿಯತೆಯ ಅಪೂರ್ವ ಸಂಗಮ



ಮಹೇಶ್ವರಿ ಯು.
ಫೋಟೋ: ಡಾ. ನಿಸರ್ಗ

ಕಾಸರಗೋಡಿಗೆ ಸಮೃದ್ಧವಾದ ಸಾಹಿತ್ಯಪರಂಪರೆಯಿದೆ. ವಿಶೇಷವಾಗಿ, ಆಧುನಿಕ ಸಾಹಿತ್ಯ ಸಂದರ್ಭಕ್ಕೆ ಬಂದರೆ, ಮಂಜೇಶ್ವರ ಗೋವಿಂದ ಪೈ, ಕಯ್ಯಾರ ಕಿಞ್ಞಣ್ಣರೈ ಮುಂತಾದ ಹಿರಿಯ ತಲೆಮಾರು ಮಾತ್ರವಲ್ಲದೆ ಅವರ ನಂತರದ ತಲೆಮಾರಿನಲ್ಲಿ ಎಂ. ವ್ಯಾಸ, ಕೆ.ವಿ. ತಿರುಮಲೇಶ್, ಜೊತೆಗೆ ಈಚೆಗೆ ನಮ್ಮನ್ನಗಲಿದ ಕೆ.ಟಿ. ಗಟ್ಟಿಯವರು ನೆನಪಾಗುತ್ತಾರೆ. ಇವರು ಈಗಿಲ್ಲವಾದರೂ ಇವರು ಬಿಟ್ಟುಹೋದ ಹೆಜ್ಜೆಗುರುತುಗಳು ಭದ್ರವಾಗಿವೆ. ಕಾಸರಗೋಡಿನೊಂದಿಗೆ ಬೆಸೆದುಕೊಂಡೇ ಕೆ.ಟಿ. ಗಟ್ಟಿಯವರ ನೆನಪು ಮಾಡಿಕೊಳ್ಳಲು ಕಾರಣಗಳು ನೂರಾರು.

ಭಾಷಾವಾರು ಪ್ರಾಂತ ಪುನರ್ ವಿಂಗಡಣೆಯ ಸಂದರ್ಭದಲ್ಲಿ ಮಂಜೇಶ್ವರ ಗೋವಿಂದ ಪೈಯವರಾಗಲಿ ಕಯ್ಯಾರ ಕಿಞ್ಞಣ್ಣ ರೈ ಅವರಾಗಲೀ ಪಟ್ಟ ನೋವು ಅಷ್ಟಿಷ್ಟಲ್ಲ. ಆಡಳಿತ ಸೌಕರ್ಯದ ನೆಪವೊಡ್ಡಿ, ಭಾಷಿಕವಾಗಿ ಸಾಂಸ್ಕೃತಿಕವಾಗಿ ಬೆಸೆದ ದಕ್ಷಿಣ ಕನ್ನಡ ಜಿಲ್ಲೆಯಿಂದ ಕಾಸರಗೋಡನ್ನು ಬೇರ್ಪಡಿಸಿ ಕೇರಳಕ್ಕೆ ಇತ್ತುದು ಮಗುವನ್ನು ತಾಯಿಯಿಂದ ಬೇರ್ಪಡಿಸಿದ ನೃಶಂಸತನದ ಕಾರ್ಯವೆಂದು ಗೋವಿಂದ ಪೈಯವರು ಗುರುತಿಸಿದ್ದಾರೆ. 'ಬೆಂಕಿ ಬಿದ್ದಿದೆ ಮನೆಗೆ' ಎಂದು ಕರೆಯಿತ್ತ ಕಯ್ಯಾರರೂ ಮತ್ತೆ ಕರ್ನಾಟಕದೊಂದಿಗೆ ವಿಲೀನೀಕರಣಕ್ಕೆ ಬರಹ, ಭಾಷಣ, ಸತ್ಯಾಗ್ರಹ, ಧರಣಿ ಸಮ್ಮೇಳನ ಇತ್ಯಾದಿ ಚಟುವಟಿಕೆಗಳ ಮೂಲಕ ಅವಿರತ ಹೋರಾಟ ನಡೆಸಿದವರು.

ಆಗ ಕಾಲೇಜು ವಿದ್ಯಾರ್ಥಿಗಳಾಗಿದ್ದ ತಿರುಮಲೇಶ, ಎಂ. ವ್ಯಾಸರು ಕೂಡ ವಿಲೀನಕ್ಕಾಗಿ ರೂಪಿತವಾದ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು.